

**ಅತ್ತರು, ಸೆಂಟ್, ಸುಗಂಧದ್ರವ್ಯ ಎಂದೆಲ್ಲ ಕರೆಸಿಕೊಳ್ಳುವ ವಿಶಿಷ್ಟ ಘಮಲು ಸೂಸುವ ಅರೋಮವೊಂದು ಜನರ ಜೀವನಶೈಲಿಯ ಭಾಗವಾಗಿ ಹೋಗಿದೆ. ಸೌಂದರ್ಯ, ಫ್ಯಾಷನ್ ಎಂದೆಲ್ಲ ತಲೆಕೆಡಿಸಿಕೊಳ್ಳುವ ಯುವಕ ಯುವತಿಯರು ಅತ್ತರು ಇಲ್ಲದೆ ಹೊರಗೆ ಕಾಲಿಡುವುದೇ ಇಲ್ಲ.**

**■ ಉಮಾ ಅನಂತ್**

ಘಮಘಮಿಸುವ ಸುಗಂಧ ಭಾವನಾತ್ಮಕವಾಗಿಯೂ ಹೆಚ್ಚು ಸ್ಪಂದಿಸುವಂತೆ ಮಾಡುತ್ತದೆ. ಯಾವುದೇ ರೀತಿಯ ಕೆಟ್ಟ ವಾಸನೆಯನ್ನು ನಿವಾರಿಸಿ ಸುಮಧುರ ಪರಿಮಳ ಜನರ ಇರುವಿಕೆಗೆ ಆಸ್ಪದ ನೀಡುತ್ತದೆ.

ಮನೆಗಳಲ್ಲೂ ಈಗೀಗ ಸುಗಂಧ ದ್ರವ್ಯದ ಬಳಕೆ ಹೆಚ್ಚು. ಮನೆಗಳ ಕೊಠಡಿಗಳಲ್ಲಿ, ಶೌಚಾಲಯಗಳಲ್ಲಿ ಸುಗಂಧ ಸ್ಪ್ರೇ ಮಾಡಿದರೆ ಅಲ್ಲಿ ಕ್ರಿಮಿಕೀಟಗಳಿಗೂ ನೋ ಎಂಟ್ರಿ. ಮೈಮನಕ್ಕೂ ಉಲ್ಲಾಸದಾಯಕ ಎಂಬುದನ್ನು ಅರಿತ ಸುಗಂಧ ದ್ರವ್ಯ ತಯಾರಿಕಾ ಕಂಪೆನಿಗಳು ಗ್ರಾಹಕರ ಬೇಡಿಕೆಗಳನ್ನು ಎನ್‌ಕ್ಯಾಶ್ ಮಾಡಿಕೊಳ್ಳುತ್ತಿವೆ. ಹೀಗಾಗಿ ಸುಗಂಧ ದ್ರವ್ಯ ಬಳಕೆದಾರರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಇದರ ಲಾಭವನ್ನು ಕಂಪೆನಿಗಳು ಪಡೆದುಕೊಳ್ಳುತ್ತಿವೆ.

ರಾಸಾಯನಿಕ ಮುಕ್ತವಾದ ಸುಗಂಧ, ಹರ್ಬಲ್ ಸುಗಂಧ, ನೈಸರ್ಗಿಕ ಪದಾರ್ಥಗಳಿಂದ ತಯಾರಿಸಿದ ಸುಗಂಧ, ತಾಜಾ ಮಲ್ಲಿಗೆ, ಗುಲಾಬಿ, ಸಂಪಿಗೆಯ ಕಂಪನ್ನು ಸೂಸುವ, ಮೈಮನವನ್ನು ತಂಪಾಗಿಸುವ ಸುಗಂಧ.. ಹೀಗೆ ತರಾವರಿ ಸುಗಂಧ ದ್ರವ್ಯಗಳು ಪೈಪೋಟಿ ನಡೆಸುತ್ತಿವೆ. ಸಣ್ಣ ಉದ್ಯಮವಾಗಿ ಮನೆಗಳಲ್ಲೂ ಸುಗಂಧ ದ್ರವ್ಯ ತಯಾರಿಸುವವರಿದ್ದಾರೆ; ದೊಡ್ಡ ಪ್ರಮಾಣದಲ್ಲಿ ತಯಾರಿಸಿ ವಿದೇಶಗಳಿಗೂ ಸುಗಂಧದ ಕಂಪನ್ನು ಹಬ್ಬಿಸುವ ಬೃಹತ್ ಕಂಪೆನಿಗಳೂ ಇವೆ. ಕಾಲ ಬದಲಾದಂತೆ ಜನರ ಮನೋಭಾವನೆ, ಅಭಿರುಚಿ, ಅಭಿಲಾಷೆಗಳೂ ಬದಲಾಗುತ್ತಿವೆ. ಒಂದು ಹೊಸ ಕಾರು ಕೊಂಡರೆ ಇದರೊಳಗೆ ಸಿಂಪಡಿಸಲು ಸುಗಂಧದ್ರವ್ಯ ಅನಿವಾರ್ಯ ಎಂಬ ಮಟ್ಟಕ್ಕೆ ಬೇಡಿಕೆ ವಿಸ್ತರಿಸಿದೆ.

'ಸುಗಂಧ ದ್ರವ್ಯದಿಂದ ಆರೋಗ್ಯಕ್ಕೆ ಹಾನಿಯೇನೂ ಇಲ್ಲ. ಇದರ ತಯಾರಿಕೆಗೆ ಬಳಸುವ ಕಚ್ಚಾ ವಸ್ತುಗಳೆಲ್ಲವೂ ನೈಸರ್ಗಿಕವಾದದ್ದು. ಸುಗಂಧದ ಗುಣಮಟ್ಟ ಅಳೆಯುವ 'ಗ್ರಾಸ್' ತಂತ್ರಜ್ಞಾನವೂ ಕೂಡ ಗುಣಮಟ್ಟವನ್ನು ನಿಭಾಯಿಸುವ ಕಾರಣ ಹರ್ಬಲ್ ಸುಗಂಧ ದ್ರವ್ಯ ಆರೋಗ್ಯದ ನಿಟ್ಟಿನಲ್ಲಿ ಸಂಪೂರ್ಣ ಸುರಕ್ಷಿತ' ಎನ್ನುತ್ತಾರೆ ಅತ್ತರು ನಿರ್ಮಾಣ ಕಂಪೆನಿ ಮುಖ್ಯಸ್ಥ ಸುರೇಂದ್ರ ಪಾಟೀಲ್.

## ಏರ್ ಫ್ರೆಶ್ನರ್ ಕಾಲ

ಸುಗಂಧ ದ್ರವ್ಯದ ಜೊತೆಗೆ ಇಡೀ ಮನೆಯನ್ನು ಸುಗಂಧಮಯವಾಗಿಸುವ ಏರ್ ಫ್ರೆಶ್ನರ್ ಕೂಡ ಬಂದಿದೆ. ಆ್ಯಂಬಿಪ್ಯೂರ್ ಮನೆಗಳಿಗೇ ವಿಶೇಷವಾಗಿ ರೂಪಿಸಲಾದ ಸುಗಂಧ. ಇದು ಮನೆಯೊಳಗಿನ ದುರ್ವಾಸನೆಯನ್ನು ಹೋಗಲಾಡಿಸಿ ಮನೆ ಘಮಘಮಿಸುವಂತೆ ಮಾಡುತ್ತದೆ.

'ಮನೆಯೊಳಗೆ ವಿವಿಧ ರೀತಿಯ ವಾಸನೆಗಳಿರುತ್ತವೆ. ಇದನ್ನು ನಿವಾರಿಸಲು ಗೃಹಿಣಿ ಹರಸಾಹಸ ಮಾಡಬೇಕಾಗುತ್ತದೆ. ಅಡುಗೆ ಮನೆಯಲ್ಲಿ ಬೆಳ್ಳುಳ್ಳಿ, ಈರುಳ್ಳಿ ಹುರಿದದ್ದು, ಅಡುಗೆ ಎಣ್ಣೆ, ಒಗ್ಗರಣೆ ಇತ್ಯಾದಿಗಳು. ಇನ್ನು ಮಾಂಸಾಹಾರ ಅದರಲ್ಲೂ ಹುರಿದ ಮೀನಿನ ವಾಸನೆ ಅಂತೂ ಬೇಗನೆ ಹೋಗುವುದೇ ಇಲ್ಲ. ಈ ಎಲ್ಲದರ ನಿವಾರಣೆಗಾಗಿ ಮನೆಗಳಲ್ಲಿ ಸುಗಂಧ ದ್ರವ್ಯ ಬಳಸುವುದು ಅನಿವಾರ್ಯ' ಎನ್ನುತ್ತಾರೆ ಸುಗಂಧ ದ್ರವ್ಯವನ್ನು ದಿನನಿತ್ಯ ಬಳಸುವ ಗೃಹಿಣಿ ಸುನಂದಾ.

ದೇಶದಲ್ಲಿ ಸುಗಂಧ ದ್ರವ್ಯ ಬಳಸುವವರ ಬಗ್ಗೆ ಮಾಹಿತಿ ಕಲೆ ಹಾಕಲು ಸುಗಂಧದ್ರವ್ಯ ತಯಾರಿಕಾ ಕಂಪೆನಿ ಕಳೆದ ವರ್ಷಾಂತ್ಯದಲ್ಲಿ ಸಮೀಕ್ಷೆಯೊಂದನ್ನು ಕೈಗೊಂಡಿತ್ತು. ಮನೆಯೊಳಗೆ ಕೆಟ್ಟ ವಾಸನೆ ಬರದಂತೆ ತಡೆಯುವುದು, ಅತಿಥಿಗಳನ್ನು ಮುಜುಗರವಿಲ್ಲದೆ ಒಳಗೆ ಕರೆಯಲು ಅವಕಾಶವಾಗುವುದು ಇಂತಹ ಸುಗಂಧ ದ್ರವ್ಯಗಳ ಬಳಕೆಯಿಂದ ಎಂಬ ಅಭಿಪ್ರಾಯವನ್ನು ಸಮೀಕ್ಷೆಯಲ್ಲಿ ಭಾಗವಹಿಸಿದ ಮಹಿಳೆಯರು ವ್ಯಕ್ತಪಡಿಸಿದ್ದಾರೆ.

ನಮ್ಮ ದೇಶದ ಸುಗಂಧ ದ್ರವ್ಯಕ್ಕೆ ವಿದೇಶಗಳಲ್ಲೂ ಬಹಳ ಬೇಡಿಕೆ ಇದೆ. ಇಲ್ಲಿ ಸಿಗುವ ತಾಜಾ ಸುವಾಸನೆಯ ಸುಗಂಧದ್ರವ್ಯ ಬೇರೆ ದೇಶಗಳಲ್ಲಿ ದುರ್ಲಭವಾಗಿರುವುದು ಇದಕ್ಕೆ ಕಾರಣ. ಮಲ್ಲಿಗೆ, ಗುಲಾಬಿ, ಸಂಪಿಗೆ, ಸುಗಂಧರಾಜ ಗಳಂತಹ ಸುಮಧುರ ಕಂಪನ್ನು ಬೀರುವ ಹೂವುಗಳು ಕೂಡ ನಮ್ಮಲ್ಲಿ ಹೆಚ್ಚಾಗಿ ಬೆಳೆಯುವುದರಿಂದ ಇದರ ಎಸೆನ್ಸ್ ಅನ್ನು ಸುಗಂಧದ್ರವ್ಯಕ್ಕೆ ಬಳಕೆ ಮಾಡಲಾಗುತ್ತದೆ. ಹೀಗಾಗಿ ನಮ್ಮ ಸುಗಂಧದ್ರವ್ಯಗಳಿಗೂ ಬೇಡಿಕೆ ಹೆಚ್ಚು. ■

